# ಸಂಕುಚಿತ ಚಹರೆಯಿಂದ ಗಾಂಧಿಗೆ ಬೇಕಿದೆ ‘ಮುಕ್ತಿ’

**ಪ್ರಜಾವಾಣಿ ವಾರ್ತೆ**

ಬೆಂಗಳೂರು: ‘ಮಹಾತ್ಮ ಗಾಂಧಿಯನ್ನು ಖಾದಿ, ಪೊರಕೆ, ಆಡಿನ ಹಾಲಿನಂತಹ ಕೆಲವೇ ಸಂಗತಿಗಳಿಗೆ ಗಾಂಧಿವಾದಿಗಳು ಬಂಧಿಸಿಟ್ಟಿದ್ದಾರೆ. ಅಂತಹ ಸಂಕುಚಿತ ಚಹರೆಯಿಂದ ಮಹಾತ್ಮನಿಗೆ ಮುಕ್ತಿ ನೀಡಬೇಕಿದೆ’ ಎಂದು ಗಾಂಧೀಜಿ ಅವರ ಮೊಮ್ಮಗನೂ ಆಗಿರುವ ಪಶ್ಚಿಮ ಬಂಗಾಳದ ಮಾಜಿ ರಾಜ್ಯಪಾಲ ಗೋಪಾಲಕೃಷ್ಣ ಗಾಂಧಿ ಅಭಿಪ್ರಾಯಪಟ್ಟರು.

ರಾಮನ್ ಸಂಶೋಧನಾ ಸಂಸ್ಥೆಯಲ್ಲಿ ಶುಕ್ರವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಅವರು ‘ಗಾಂಧೀಜಿ ಭಾರತ’ ವಿಷಯವಾಗಿ ವಿಶೇಷ ಉಪನ್ಯಾಸ ನೀಡಿದರು.

‘ಗಾಂಧೀಜಿ ಜನಿಸಿದ ಆ ಸಂದರ್ಭ ಹೆಣ್ಣು ಶಿಶುಗಳ ಮರಣದ ಕಾಲ. ಕರಮ್‌ಚಂದ್ ಗಾಂಧಿ ಅವರು ಪುತಲಿ ಬಾಯಿ ಅವರನ್ನು ವರಿಸುವ ಮುನ್ನ ಅವರ ಮೂವರು ಪತ್ನಿಯರು ಅಸುನೀಗಿದ್ದರು. ಹೇಳಲು ಹೆಸರೂ ಇಲ್ಲದೆ ಅವರೆಲ್ಲ ಕಳೆದುಹೋದರು. ಕಾಠೇವಾಡ ಕೇವಲ ಹವೇಲಿಗಳ ಊರಾಗಿರಲಿಲ್ಲ. ಅಲ್ಲಿನ ರುಮಾಲಿನಷ್ಟೇ ರಾಜಕೀಯ ಒಳಸುಳಿಗಳು ತುಂಬಿಕೊಂಡಿದ್ದವು’ ಎಂದು ಹೇಳಿದರು.



ನಗರದ ರಾಮನ್ ಸಂಶೋಧನಾ ಸಂಸ್ಥೆಯಲ್ಲಿ ಶುಕ್ರವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಪಶ್ಚಿಮ ಬಂಗಾಲದ ಮಾಜಿ ರಾಜ್ಯಪಾಲ ಗೋಪಾಲಕೃಷ್ಣ ಗಾಂಧಿ ಮತ್ತು ಹಿರಿಯ ವಿಜ್ಞಾನಿ ಡಾ. ಕೆ. ಕಸ್ತೂರಿರಂಗನ್ ಚರ್ಚೆಯಲ್ಲಿ ತೊಡಗಿದ್ದರು

‘ಮನೆ ಕೆಲಸಕ್ಕೆ ಬಂದ ಮಹಿಳೆಯನ್ನು ಮುಟ್ಟಿಸಿಕೊಂಡರೆ ಗಾಂಧೀಜಿ ಅವರಿಗೆ ಸ್ನಾನ ಮಾಡಿಸಲಾಗುತ್ತಿತ್ತು. ಇಂತಹ ಅನುಭವಗಳು ಮಹಾತ್ಮನಿಗೆ ಅಮೂರ್ತ ರೂಪವನ್ನು ನೀಡುತ್ತಾ ಹೋದವು. ಲಂಡನ್ನಿನಲ್ಲಿ ಬ್ಯಾರಿಸ್ಟರ್ ಪದವಿ ಪಡೆದು ದಕ್ಷಿಣ ಆಫ್ರಿಕಾಕ್ಕೆ ಹೋದಾಗ ಆ ಮಹಾತ್ಮ ಮೂರ್ತ ರೂಪವನ್ನು ಪಡೆದ. ಹೀಗಾಗಿಯೇ ನೆಲ್ಸನ್ ಮಂಡೇಲಾ, ‘ನೀವು ವಕೀಲನನ್ನು ಕಳಿಸಿದರೆ ನಾವು ಮಹಾತ್ಮನನ್ನು ಹಿಂದಿರುಗಿಸಿದೆವು’ ಎಂದಿದ್ದರು’ ಎಂದು ನೆನಪಿಸಿಕೊಂಡರು.

‘ಲಂಡನ್ ಗಾಂಧೀಜಿಗೆ ಬಲು ಇಷ್ಟವಾದ ನಗರವಾಗಿತ್ತು. ಅಲ್ಲಿ ಅವರು ಸಸ್ಯಾಹಾರಿ ಹೋಟೆಲ್‌ಗಳ ಹುಡುಕಾಟದಲ್ಲೇ ಹೆಚ್ಚಿನ ಸಮಯ ಕಳೆದರು’ ಎಂದು ಚಟಾಕಿ ಹಾರಿಸಿದರು.

‘ಮುಸ್ಲಿಮರ ಮೇಲಿನ ದ್ವೇಷಕ್ಕಾಗಿ ಗೋಹತ್ಯೆಯನ್ನು ವಿರೋಧಿಸಿದರೆ ಅದಕ್ಕೆ ನನ್ನ ಸಹಮತವಿಲ್ಲ ಎಂಬುದು ಗಾಂಧೀಜಿ ಅವರ ಸ್ಪಷ್ಟ ಅಭಿಪ್ರಾಯವಾಗಿತ್ತು. ಮದ್ಯಪಾನ ವಿರೋಧಿಸಿದರೂ ದೇಶ ಕಾಯುವ ಸೈನಿಕರಿಗೆ ಅದನ್ನು ಕೊಡುವುದಕ್ಕೆ ಅವರು ಸಹಮತ ಹೊಂದಿದ್ದರು’ ಎಂದು ತಿಳಿಸಿದರು.

‘ಗಾಂಧೀಜಿ ಏನೂ ದೇಶಕ್ಕಿಂತ ದೊಡ್ಡವರಲ್ಲ. ಅವರ ‘ಹಿಂದ್ ಸ್ವರಾಜ್’ ಅತ್ಯುತ್ಕೃಷ್ಟ ಕೃತಿ ಎಂದೇನೂ ನನಗೆ ಅನಿಸುವುದಿಲ್ಲ’ ಎಂದ ಅವರು, ‘ಗಾಂಧೀಜಿ ನಮಗೆ ವಿರೋಧಿಗಳ ಜತೆ ಹೇಗೆ ದೋಸ್ತಿ ಮಾಡಬೇಕು ಎನ್ನುವುದನ್ನು ಕಲಿಸಿದರೂ ನಮ್ಮವರನ್ನೇ ಹೇಗೆ ಪ್ರೀತಿಸಬೇಕು ಎಂಬುದನ್ನು ಹೇಳಿಕೊಡಲಿಲ್ಲ ಎಂದಿದ್ದರು ಜೆ.ಬಿ. ಕೃಪಲಾನಿ. ಗಾಂಧೀಜಿಗೆ ಅಧಿಕ ರಕ್ತದೊತ್ತಡ ಇತ್ತು. ಹೀಗಾಗಿ ಅನುಯಾಯಿಗಳ ಮೇಲೆ ಅವರು ಬಲುಬೇಗ ಸಿಟ್ಟಿಗೇಳುತ್ತಿದ್ದರು’ ಎಂದು ವಿವರಿಸಿದರು.

‘ಗಾಂಧೀಜಿ ಎದೆಗೆ ಗುಂಡು ಬಿದ್ದಾಗ ‘ಹೇ ರಾಮ್’ ಎಂದಿದ್ದರೆಂಬುದು ಒಂದು ವಾದವಾದರೆ ‘ರಾಮ್ ರಾಮ್’ ಎಂದಿದ್ದರು ಎನ್ನುವುದು ಇನ್ನೊಂದು ವಾದ. ಈ ವಾದಗಳಿಂದ ಏನೂ ಪ್ರಯೋಜನವಿಲ್ಲ. ಪ್ರಾರ್ಥನೆಗೆ ಹೊರಡುವಾಗ ‘ತಡವಾಗುವುದನ್ನು ನಾನು ಸಹಿಸುವುದಿಲ್ಲ’ ಎಂದು ಗುಜರಾತಿಯಲ್ಲಿ ಅವರು ಹೇಳಿದ್ದು ಕೊನೆ ಮಾತಾಗಿ ದಾಖಲಾಗಿದೆ. ತಡವಾಗುವುದನ್ನು ಗಾಂಧೀಜಿ ಸಹಿಸದಿದ್ದರೂ ಗೋಡ್ಸೆ ಮಾತ್ರ ಸಹಿಸಿಕೊಂಡು ನಿಂತಿದ್ದರು’ ಎಂದು ಮಾತು ಮುಗಿಸಿದರು.

## ರಾವಣನ ಅಭಯಹಸ್ತ

‘ರಾಮನ್ ಸಂಸ್ಥೆಯ ಅತಿಥಿ ಗೃಹದ ನನ್ನ ರೂಮ್‌ನಲ್ಲಿ ರಾವಣನ ಅಭಯ ಹಸ್ತವಿರುವ ಅಪರೂಪದ ಚಿತ್ರವಿದೆ. ದೇಶದಲ್ಲಿ ಕುರುಡು ಕಾಂಚಾಣದ ನೃತ್ಯ, ಮಹಿಳೆಯರ ಮೇಲಿನ ಅತ್ಯಾಚಾರ ಹಾಗೂ ಕೋಮುದ್ವೇಷ ಹೆಚ್ಚಾಗಿರುವ ಈ ಸನ್ನಿವೇಶದಲ್ಲಿ ನಮಗೆ ರಾವಣನ ಅಭಯಹಸ್ತವೇ ಬೇಕಿದೆ’ ಎಂದು ಗೋಪಾಲಕೃಷ್ಣ ಗಾಂಧಿ ಹೇಳಿದರು.

‘ನೈಸರ್ಗಿಕ ಸಂಪನ್ಮೂಲ ಕೊಳ್ಳೆ ಹೊಡೆದು ವ್ಯಾಪಾರ ಮಾಡುವುದು ಒಂದೆಡೆಯಾದರೆ, ವ್ಯಾಪಾರಿಗಳ ದುಡ್ಡಿನಿಂದ ಚುನಾವಣೆಗೆ ಧುಮುಕುವುದು ಮತ್ತೊಂದೆಡೆ. ಈ ಕೂಟದಿಂದ ನಡೆದಿರುವ ಕಾಂಚಾಣದ ಕುಣಿತಕ್ಕೆ ಕೊನೆ ಎಲ್ಲಿ’ ಎಂದು ಕೇಳಿದರು. ‘ದೇಶದಲ್ಲಿ ಸ್ವಚ್ಛತಾ ಆಂದೋಲನ ನಡೆದಿದೆ. ಒಳ್ಳೆಯ ಕೆಲಸ. ಆದರೆ, ಅದಕ್ಕಿಂತ ದೊಡ್ಡ ಪ್ರಮಾಣದಲ್ಲಿ ಉತ್ಪಾದನೆ ಆಗುತ್ತಿರುವ ಅಣು, ಇ–ತ್ಯಾಜ್ಯಕ್ಕೆ ಎಲ್ಲಿದೆ ಪರಿಹಾರ’ ಎಂದು ಪ್ರಶ್ನಿಸಿದರು. ‘ಬರಲಿರುವ ಅಣು ಸ್ಥಾವರಗಳ ಕುರಿತು ನೆನೆದರೆ ಭಯವಾಗುತ್ತದೆ’ ಎಂದು ಅವರು ಹೇಳಿದರು.

‘ಮಕ್ಕಳು ಪಟಾಕಿ ಹೊಡೆದು ಸಂಭ್ರಮಿಸುವಂತೆ ಕ್ಷಿಪಣಿ ಉಡಾಯಿಸಿ ಸಂಭ್ರಮಿಸುವ ಕಾಲದಲ್ಲಿ ನಾವಿದ್ದೇವೆ. ಗಾಂಧೀಜಿ ಸತ್ಯಾಗ್ರಹ, ಸರ್ವೋದಯ ಮಂತ್ರ ನೀಡಿದರೆ, ನೆಹರೂ ಪಂಚಶೀಲ ತತ್ವ ಕೊಟ್ಟರು. ನಂತರ ಬಂದವರು ‘ನಾಗ’, ‘ಅಗ್ನಿ’ಗಳ ಕಾಣಿಕೆ ನೀಡಿದರು. ಮುಂದೆ ‘ಘೋರಿ’, ‘ಘಜನಿ’ಗಳು ಬಂದರೂ ಅಚ್ಚರಿಪಡಬೇಕಿಲ್ಲ ಎಂದರು.

**Prajavani, 31st January 2015**